ಮತ್ತು ನಾದಲಿಗಳಲ್ಲಿ 66/11 ಕೆ ವಿ ವಿದ್ಯುತ್ ಉಪ ಕೇಂದ್ರಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿದೆ ಗೌರಿಬಿದನೂರು ತಾಲ್ಲೂಕಿನ ಗುಂಡ್ಲು ಕೊತ್ತೂರಿನ ಬಳಿ ನೂತನ 66/11 ಕೆ ವಿ ವಿದ್ಯುತ್ ನಬ್ ಸ್ಟೇಷನ್ನನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಕಾಮಗಾರಿ ಗುತ್ತಿಗೆಯನ್ನು ಗುತ್ತಿಗೆದಾರರಿಗೆ ದಿನಾಂಕ 8 12 2006 ರಂದು, ವಹಿಸಲಾಗಿದ್ದು ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ ಕಾಮಗಾರಿಯು ಸೆಪ್ಟೆಂಬರ್ 2007ರ ಅಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ

ಸೋಮೇನಹಳ್ಳಿಯಲ್ಲಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾಪ ಸದ್ಯಕ್ಕೆ ಇರುವುದಿಲ್ಲ

446 (346) **ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ)** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ ಡಿ ಎಂ ನಂಜುಂಡಪ್ಪ ವರದಿಯನ್ವಯ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ನಬಾರ್ಡ್ ಯೋಜನೆಯಡಿ ವಿಶೇಷ ಅನುದಾನ ನೀಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೆ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಡಾ ಡಿ ಎಂ ನಂಜುಂಡಪ್ಪ ಸಮಿತಿಯ ಅಂತಿಮ ವರದಿಯನ್ನು ಜೂನ್–2202 ರಲ್ಲಿ ಪಡೆಯಲಾಗಿದೆ ಈ ವರದಿಯಲ್ಲಿ ಅತಿ ಹಿಂದುಳಿದ ತಾಲ್ಲೂಕುಗಳು ಎಂದು ಗುರುತಿಸಲಾಗಿರುವ 39 ತಾಲ್ಲೂಕುಗಳಲ್ಲಿ 2003–04 2004–05 ಮತ್ತು 2005–06ನೇ ಸಾಲುಗಳಲ್ಲಿ 286 ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು 187 24 ಕೋಟಿ ರೂ ಮೊತ್ತದಲ್ಲಿ ನಬಾರ್ಡ್‌ನಿಂದ ಅನುಮೋದನೆ ಪಡೆದು ಕೈಗೊಳ್ಳಲಾಗಿದೆ ಇದಲ್ಲದೆ 2006–07ನೇ ಸಾಲಿನಲ್ಲಿ 107 ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು 72 60 ಕೋಟಿ ರೂ ಮೊತ್ತದಲ್ಲಿ ಕೈಗೊಳ್ಳಲು ಪ್ರಸ್ತಾವಿನಲಾಗಿದೆ

ಆ) ಮೇಲೆ ತಿಳಿಸಿರುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ

447 (151) **ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ)** ಮಾನ್ಯ ಸಹಕಾರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರ ಇಲಾಖೆಯಲ್ಲಿ ವಿವಿಧ ಚೀಟಿ ಸಂಸ್ಥೆಗಳು (ಚಿಟ್ ಫಂಡ್) ಇಟ್ಟಿರುವ ಭದ್ರತಾ ರೇವಣಿ ಹಣ ಎಷ್ಟು, ಸಂಸ್ಥೆವಾರು, ಜಿಲ್ಲಾವಾರು ವಿವರ ನೀಡುವುದು),

ಆ) ಈ ರೀತಿಯ ಭದ್ರತಾ ರೇವಣಿ ಮೊತ್ತಕ್ಕೆ ವಿಧಿಸುವ ಬಡ್ಡಿ ಹಾಗೂ ಅವಧಿ ಮುಗಿದ ಬಳಿಕ ಹಿಂತಿರುಗಿಸಲು ಅನುಸರಿಸುವ ಮಾನದಂಡಗಳೇನು,

ಇ) ಇಂತಹ ಭದ್ರತಾ ಹಣ ಬಿಡುಗಡೆ ಮಾಡುವಲ್ಲಿ ಇಲಾಖಾ ಅಧಿಕಾರಿಗಳು ನೌಕರರು ಷಾಮೀಲಾಗಿ ಅವ್ಯವಹಾರ ಅಕ್ರಮ ನಡೆದಿರುವುದು ಬೆಳಕಿಗೆ ಬಂದಿದೆಯೆ?

ಈ) ಚಿಟ್ ಫಂಡ್ ವಿಭಾಗದಲ್ಲಿ (ನಕಲಿ ಸಹಿ) ಪ್ರಕರಣದ ಬಗ್ಗೆ ಇಲಾಖೆ ತನಿಖೆ ಕೈಗೊಂಡಿದೆಯೇ,

ಉ) ಇದರಲ್ಲಿ ಷಾಮೀಲಾಗಿರುವ ಅಧಿಕಾರಿ/ನೌಕರರು ಯಾರ್ಯಾರು ಮತ್ತು ಇವರ ಮೇಲೆ ಕೈಗೊಂಡಿರುವ ಕ್ರಮಗಳೇನು? (ಹೆಸರು ಮತ್ತು ಹುದ್ದೆಯ ವಿವರ ನೀಡುವುದು)

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ರಾಜ್ಯದಲ್ಲಿನ 27 ಜಿಲ್ಲೆಗಳಲ್ಲಿ 358 ಚೀಟಿ ಸಂಸ್ಥೆಗಳು ಇರುತ್ತವೆ ಅವುಗಳು ಸರ್ಕಾರಕ್ಕೆ ಪಾವತಿಸಿದ ಭದ್ರತಾ ರೇವಣಿ ಮೊತ್ತ ರೂ 11053 38 ಲಕ್ಷಗಳು ಇರುತ್ತದೆ

ಆ) ಆರ್ ಬಿ ಯ ಅನುಮೋದಿಸಿದ ವಿವಿಧ ಬ್ಯಾಂಕುಗಳು ಬಡ್ಡಿಯನ್ನು ಸಾಲಿಯಾನ ಶೇಕಡ 5 ರಿಂದ 8 ರ ದರದಲ್ಲಿ ನೀಡುತ್ತಿರುತ್ತವೆ ಅವಧಿ ಮುಗಿದ ಭದ್ರತಾ ರೇವಣಿಯನ್ನು ಚೀಟಿ ನಿಧಿ ಅಧಿನಿಯಮ 1982 ರ ಪ್ರಕರಣ 20(1)(ಎ) ರನ್ವಯ ಸಕ್ಷಮ ಪ್ರಾಧಿಕಾರದ ಮತ್ತು ಚೀಟಿ ಸಂಸ್ಥೆಯ ಜಂಟಿ ಹೆಸರಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಅನುಮೋದಿಸಿದ ವಿವಿಧ ಬ್ಯಾಂಕುಗಳಲ್ಲಿ ರೇವಣಿ ಮಾಡಿದ ಭದ್ರತಾ ರೇವಣಿಯನ್ನು 1983 ರ ಚೀಟಿ ನಿಧಿ ನಿಯಮ 16(1)ರನ್ವಯ ಪ್ರಕಟಣೆ ಹೊರಡಿಸಿ, 15 ದಿನಗಳ ಕಾಲಾವಕಾಶ ನೀಡಿ ಈ ಅವಧಿಯಲ್ಲಿ ಚಂದಾದಾರರಿಂದ ಆಕ್ಷೇಪಣೆಗಳು ಬಾರದಿದ್ದ ಪಕ್ಷದಲ್ಲಿ ಆಯಾ ಗುಂಪಿಗೆ ಸಂಬಂಧಿಸಿದ ಭದ್ರತಾ ರೇವಣಿ ಮೊಬಲಗನ್ನು ಹಿಂದಿರುಗಿಸಲು ಸಂಬಂಧಿಸಿದ ಬ್ಯಾಂಕುಗಳಿಗೆ ಆದೇಶ ನೀಡಲಾಗುತ್ತದೆ

ಇ) ಬೆಂಗಳೂರು ಪ್ರಾಂತದ ಚೀಟಿ ಜಂಟಿ ನಿಬಂಧಕರ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರು ಮೇಲಾಧಿಕಾರಿಯವರ ನಕಲಿ ಸಹಿ ಮಾಡಿ, ರೇವಣಿ ಹಣ ರಸೀತಿಗಳನ್ನು ವಾಪಸ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಈ) ಸಹಕಾರ ಸಂಘಗಳ ನಿಬಂಧಕರು ಸಂ ಆರ್ ಸಿಎಸ್/ಸಿಬ್ಬಂದಿ /20/ಇಸಿಸಿ2005–06, ದಿನಾಂಕ 5–7–2005 ರಲ್ಲಿ ವಿಚಾರಣೆಗೆ ಆದೇಶಿಸಿ ಕ್ರಮ ಕೈಗೊಳ್ಳಲಾಗಿದೆ ಸಹಕಾರ ಸಂಘಗಳ ಅವರ ನಿಬಂಧಕರು (ಕೈಗಾರಿಕಾ ಸಹಕಾರ ಸಂಘಗಳು) ಇವರು ಪ್ರಾಥಮಿಕ ತನಿಖೆ ನಡೆಸಿ ವರದಿ ನಲ್ಲಿಸಿರುತ್ತಾರೆ

ಉ) ಈ ಪ್ರಕರಣದಲ್ಲಿ ಷಾಮೀಲಾಗಿರುವ ನೌಕರ ಶ್ರೀ ಎನ್ ಜೆ ಗೋಪಾಲ, ದ್ವಿತೀಯ ದರ್ಜೆ ಸಹಾಯಕರು ಇವರು ಎಸಗಿರುವ ದಂಡಾರ್ಹ ಅಪರಾಧಕ್ಕಾಗಿ ಸೆಂಟ್ರಲ್ ಪೊಲೀಸ್ ಠಾಣೆ, ಬೆಂಗಳೂರು, ಇಲ್ಲಿ ಇಲಾಖಾವತಿಯಿಂದ ಎಫ್ ಐ ಆರ್, ಸಂ 110/2005 ರಂತೆ ದಿನಾಂಕ 29 7 2005 ರಂದು ದೂರು ದಾಖಲಿಸಲಾಗಿದೆ ಈ ದೂರು ಅರ್ಜಿ ಮೇಲೆ ತನಿಖೆ ನಡೆಸಿದ ನಂತರ ಇದು ಸದ್ಯಕ್ಕೆ ಪತ್ತೆಯಾಗದ ಪ್ರಕರಣ ಎಂಬುದಾಗಿ ಪೊಲೀಸ್ ತನಿಖಾಧಿಕಾರಿಗಳು ದಿನಾಂಕ 6 3 2006ರಂದು ವರದಿ ಮಾಡಿದ ಹಿನ್ನೆಲೆಯಲ್ಲಿ ಈ ಬಗ್ಗೆ ಕಟ್ಟುನಿಟ್ಟಿನ ತನಿಖಾ ಕ್ರಮ ಕೈಗೊಂಡು ನ್ಯಾಯಾಲಯಕ್ಕೆ ಆರೋಪ ಪಟ್ಟಿಯನ್ನು ಸಲ್ಲಿಸುವ ದಿಸೆಯಲ್ಲಿ ಸಂಬಂಧಿಸಿದವರಿಗೆ ಅವಶ್ಯ ಸೂಚನೆ ನೀಡುವಂತೆ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಇವರನ್ನು ಕೋರಲಾಗಿರುತ್ತದೆ

ಈ ನೌಕರರ ವಿರುದ್ಧ 25 1 2006 ರಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದ್ದು, ಸದರಿ ನೌಕರರು ಈ ಕ್ರಮ ಪ್ರಶ್ನಿಸಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು ಇದರ ಮುಂದೆ ಸಲ್ಲಿಸಿದ ಅರ್ಜಿ ಸಂ 2050/2006 ರಲ್ಲಿ ನ್ಯಾಯಮಂಡಳಿಯು ವಿಚಾರಣಾ ನಡವಳಿಗೆ ತಡೆಯಾಜ್ಞೆ ನೀಡಿ ಆದೇಶಿಸಿರುತ್ತದೆ ಈ ಅರ್ಜಿ ಸಂಬಂಧ ನ್ಯಾಯಮಂಡಳಿಯ ನಿರ್ದೇಶನದ ಮೇರೆಗೆ ಇಲಾಖಾ ವಿಚಾರಣೆಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲೆಗಳನ್ನು ನ್ಯಾಯಮಂಡಳಿಯ ಪರಿಶೀಲನೆಗೆ ದಿನಾಂಕ 3 6 2006ರಲ್ಲಿ ನಲ್ಲಿಸಲಾಗಿದೆ ನ್ಯಾಯಾಲಯವು ನಿಡಿರುವ ಮಧ್ಯಂತರ ತಡೆಯಾಜ್ಞೆ ತೆರವಿಗೆ ಮತ್ತು ಈ ಅರ್ಜಿ ಶೀಘ್ರ ಇತ್ಯರ್ಥಕ್ಕೆ ಇಲಾಖಾ ವತಿಯಿಂದ ಪ್ರಮಾಣೀಕರಿಸಿ

ದಿನಾಂಕ 15 9 2006 ರಂದು ಲಿಖಿತ ಆಕ್ಷೇಪಣಾ ಹೇಳಿಕೆಯನ್ನು ನಲ್ಲಿಸಲಾಗಿದೆ ಮತ್ತು ಈ ಬಗ್ಗೆ ಅವಶ್ಯ ತುರ್ತು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಸರ್ಕಾರಿ ವಕೀಲರನ್ನು ಕೋರಲಾಗಿದೆ ಹಾಗೂ ಸದರಿ ಅರ್ಜಿ ಕರ್ನಾಟಕ ನ್ಯಾಯಮಂಡಳಿಯಲ್ಲಿ ಇತ್ಯರ್ಥಕ್ಕೆ ಬಾಕಿ ಇದೆ

448 (840) **ಶ್ರೀ ಸುನಿತ ವೀರಪ್ಪಗೌಡ ಜೆ (ಬನ್ನೂರು)** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡ ಹೊಸ ಕಾಲೇಜು ಹಾಲಿ ಇದ್ದ ಕಾಲೇಜು ಹಾಗೂ ಪ್ರೌಢಶಾಲೆಗಳಿಗೆ ಹೊಸ ಕಟ್ಟಡ ಹಾಗೂ ಹೆಚ್ಚುವರಿ ಕೊರಡಿ ಕಾಮಗಾರಿಗಳೆಷ್ಟು (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು),

ಆ) ಈ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಅನುದಾನದ ಮೊತ್ತ ಎಷ್ಟು,

ಇ) ಸದರಿ ಕ್ಷೇತ್ರಗಳಲ್ಲಿ ಮುಂದೆ ಕೈಗೊಳ್ಳಲಾಗುವ ಉದ್ದೇಶಿತ ಹೆಚ್ಚುವರಿ ಕೊರಡಿಗಳ ನಿರ್ಮಾಣದ ಕಾಮಗಾರಿಗಳು ಯಾವುವು?

ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮೈಸೂರು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಒಟ್ಟು 15 ಹೊಸ ಕಾಲೇಜು ಕಟ್ಟಡಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ (ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ) ಹಾಲಿ ಇರುವ ಒಟ್ಟು 9 ಕಾಲೇಜುಗಳಿಗೆ ಹೆಚ್ಚುವರಿ ಕೊರಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ

ಬಿ) ಪ್ರೌಢಶಾಲಾ ಕಟ್ಟಡಗಳಿಗೆ ಹೆಚ್ಚುವರಿ ಕೊರಡಿಗಳನ್ನು ನಿರ್ಮಿಸುವುದು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ

ಆ) ಕಾಲೇಜು ಕಟ್ಟಡಗಳಿಗೆ ಸಂಬಂಧಪಟ್ಟ ಕಾಮಗಾರಿಗಳಿಗೆ ವಿವಿಧ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ಒಟ್ಟು ರೂ 373 31 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ